ಕರ್ನಾಟಕ ಸರ್ಕಾರ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಆಯುಕ್ತರು ,ಗ್ರಾ.ಕುನೀ. &ನೈ.ಇ.,2ನೇ ಮಹಡಿ, "ಇ" ಬ್ಲಾಕ್,ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080–22240508 📠 : 22240509 ಈ–ಮೇಲ್: krwssd@gmail.com

ಸಂಖ್ಯೆ: ಗ್ರಾ.ಕು.ನೀ&ನೈಇ/441/ಮುಇಂ/ತಾಂತ್ರಿಕ/2021/975 ದಿನಾಂಕ:27.08.2021

**"ಅಧಿಸೂಚನೆ"**

ವಿಷಯ: ಏಕಗ್ರಾಮ ಹಾಗೂ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕರಡು ನೀತಿಯ ಕುರಿತಂತೆ ಸಾರ್ವಜನಿಕರಿಂದ ಅಭಿಪ್ರಾಯ / ಸಲಹೆಗಳನ್ನು ಆಹ್ವಾನಿಸುವ ಬಗ್ಗೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ಜಲ್ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಎಲ್ಲಾ ಗ್ರಾಮೀಣ ಜನವಸತಿಗಳಿಗೆ 55 LPCD ಯಂತೆ ಕುಡಿಯುವ ನೀರನ್ನು ಒದಗಿಸಲು ಭೂಮೇಲ್ಮೈಯಿಂದ ಲಭ್ಯವಿರುವ ಸುಸ್ಥಿರ ಜಲಮೂಲಗಳನ್ನು ಪರಿಗಣಿಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಹಾಗೂ ಕೊಳವೆ ಬಾವಿಗಳಿಂದ ಏಕಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಲಾಗಿದ್ದು, ಜೆ.ಜೆ.ಎಂ ಮಾರ್ಗಸೂಚಿಗಳನ್ವಯ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ವ್ಯವಸ್ಥಿತ ಅನುಷ್ಠಾನಕ್ಕಾಗಿ ಸ್ಥಿರ ಪ್ರಯತ್ನಗಳನ್ನು ಮಾಡುವಲ್ಲಿ ಯುಕ್ತ ಭಾಗಿದಾರರುಗಳೊಂದಿಗೆ ಸಮಾಲೋಚಿಸಿ ಕಾರ್ಯಾಚರಣೆ ಮತ್ತು ನಿರ್ವಹಣೆಯ ನೀತಿಯ ಕರಡನ್ನು ಸಿದ್ಧಪಡಿಸಲಾಗಿದೆ.

ದೀರ್ಘಾವಧಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳ ಸುಸ್ಥಿರ ಕಾರ್ಯಾಚರಣೆಗಾಗಿ ಬೃಹತ್ ಪ್ರಮಾಣದ ನೀರು ಸರಬರಾಜು ಹಾಗೂ ಈ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚವನ್ನು ಮರು ಪಡೆಯುವುದು ಮುಖ್ಯವಾಗಿದೆ. ಈ ಇಲಾಖಾ ವ್ಯಾಪ್ತಿಗೆ ಒಳಪಡುವ ವಲಯ ಆಡಳಿತ ಮತ್ತು ವೆಚ್ಚ ವಸೂಲಿಯನ್ನು ಸುಧಾರಿಸುವ ಪ್ರಯತ್ನದಲ್ಲಿ ಸುಧಾರಿತ ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯ ಕರಡನ್ನು ಸಿದ್ಧಪಡಿಸಲಾಗಿದೆ. ಕರಡು ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯ ಹಾಗೂ ಕಾರ್ಯತಂತ್ರದ ದಸ್ತಾವೇಜಿನ ಕುರಿತಂತೆ ಇಲಾಖೆಯ ಅಧಿಸೂಚನೆಗೆ (ದಿನಾಂಕ:30.08.2021) ಸಂಬಂಧಿಸಿದಂತೆ ಕರಡು ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯ ಕುರಿತು ಸಾರ್ವಜನಿಕರ ಅಭಿಪ್ರಾಯ / ಸಲಹೆಗಳನ್ನು ಆಹ್ವಾನಿಸಲಾಗಿದೆ.

ಕರಡು ನೀತಿಯ ಉಪವಿಧಿಗಳನ್ನು ಆಂಗ್ಲ ಮತ್ತು ಕನ್ನಡ ಆವೃತ್ತಿಯಲ್ಲಿ ದಿನಾಂಕ: 30.08.2021 ರಿಂದ 15.09.2021 ರ ವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಂತರ್ಜಾಲ ತಾಣ https://rdpr.karnataka.gov.in/english ಮತ್ತು https://english.swachhamevajayate.org ಅವಲೋಕಿಸಲು ಲಭ್ಯವಿರುತ್ತದೆ. ಲಿಖಿತ ಅಭಿಪ್ರಾಯ / ಸಲಹೆಗಳನ್ನು ಆಯುಕ್ತರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ 'ಇ' ಬ್ಲಾಕ್, ಹೆ.ಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560 009. ಈ ವಿಳಾಸಕ್ಕೆ ಅಂಚೆ / ಕೋರಿಯರ್ ಸೇವೆ ಮೂಲಕವಾಗಲಿ ಅಥವ ಖುದ್ದಾಗಿ ದಿನಾಂಕ:15.09.2021 ರೊಳಗೆ ಸಲ್ಲಿಸಲು ಕೋರಲಾಗಿದೆ. ಕಾರ್ಯಕ್ರಮದ ಸದುದ್ದೇಶದ ದೃಷ್ಟಿಯಿಂದ ಸ್ವೀಕರಿಸಲಾದ ಪ್ರತಿಕ್ರಿಯೆಗಳನ್ನು ಅಳವಡಿಸಿಕೊಳ್ಳುವ ಸೂಕ್ತತೆಯನ್ನು ನಿರ್ಣಯಿಸುವ ಅಧಿಕಾರವು ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರಲ್ಲಿ ಪ್ರದತ್ತವಾಗಿರುತ್ತದೆ.

ಈ ಕುರಿತಂತೆ ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖಾ ಕಚೇರಿಯ ದೂರವಾಣಿ ಸಂಖ್ಯೆ:080 22221862ಗೆ ಕಚೇರಿ ವೇಳೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

**ಆಯುಕ್ತರು**
ಗ್ರಾ.ಕು.ನೀ.&.ನೈ. ಇಲಾಖೆ,
ಬೆಂಗಳೂರು.